

# ನೀಲಿ ಹಕ್ಕಿಗೆ ರೆಕ್ಕೆ ಕಟ್ಟುವ ಕನಸು...

ಇಂಡಿಪೆಂಡೆಂಟ್ ಸಿನಿಮಾಗಳಲ್ಲಿಯೇ ಕನ್ನಡ ಚಿತ್ರರಂಗದ ಭವಿಷ್ಯವಿದೆ ಎಂದು ನಂಬಿರುವ ಗಣೇಶ ಹೆಗಡೆ, ಯುವ ತಲೆಮಾರಿನ ಗಮನಾರ್ಹ ನಿರ್ದೇಶಕರಲ್ಲೊಬ್ಬರು. ನೀಲಿ ಹಕ್ಕಿಯ ಮೂಲಕ ಪ್ರೇಕ್ಷಕರೆದುರು ಬರಲು ಸಜ್ಜಾಗಿರುವ ಅವರಿಗೆ, ಫೆಸ್ಟಿವಲ್‌ಗಳ ಮಿತಿಯನ್ನೂ ದಾಟಿ ಜನರಿಗೆ ಸಿನಿಮಾ ತಲುಪಿಸಬೇಕು ಎಂಬ ಹಂಬಲವಿದೆ.

■ ಪದ್ಮನಾಭ ಭಟ್

‘ಇದು ಪಕ್ಕಾ ಕಮರ್ಷಿಯಲ್ ಸಿನಿಮಾ ಖಂಡಿತಾ ಅಲ್ಲ. ಹಾಗೆಯೇ ಪೂರ್ತಿ ಆರ್ಟ್ ಸಿನಿಮಾವೂ ಅಲ್ಲ. ಬ್ರಿಡ್ಜ್ ಸಿನಿಮಾ ಎನ್ನುವುದೂ ಕಷ್ಟ. ಹಾಗಾಗಿ ನಾನು ಎಲ್ಲರನ್ನೂ ಕೇಳಿಕೊಳ್ಳುತ್ತಿದ್ದೇನೆ: ಈ ಸಿನಿಮಾವನ್ನು ಯಾವುದೇ ಒಂದು ಲೇಬಲ್ ಅಡಿಯಲ್ಲಿ ನೋಡಬೇಡಿ. ಇದೊಂದು ಇಂಡಿಪೆಂಡೆಂಟ್ ಸಿನಿಮಾ. ಹಾಗೆಯೇ ನೋಡಿ’. ತಮ್ಮ ಸಿನಿಮಾ ಕುರಿತು ಮಾತು ಆರಂಭಿಸುವ ಮೊದಲೇ ಯುವನಿರ್ದೇಶಕ ಗಣೇಶ ಹೆಗಡೆ ಹೀಗೊಂದು ಅಹವಾಲು ಇಟ್ಟುಬಿಟ್ಟರು.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಗುಣವಂತೆ ಸಮೀಪದ ಹಳ್ಳಿಯವರಾದ ಗಣೇಶ್, ಸಿನಿಮಾ ಮೋಹ ಅಂಟಿಸಿಕೊಂಡು ಸೇರಿದ್ದು ರಕ್ಷಿತ್ ಶೆಟ್ಟಿ ಟೆಂಟ್‌ಗೆ. ಆದರೆ ಕೆಲವೇ ದಿನಗಳಲ್ಲಿ ಗಾಂಧಿನಗರದ ಪಕ್ಕಾ ಕಮರ್ಷಿಯಲ್ ಜಾಯಮಾನ ನನಗೆ ಒಗ್ಗುವುದಿಲ್ಲ ಎಂದವರಿಗೆ ಮನದಟ್ಟಾಯಿತು. ‘ಅವನೇ ಶ್ರೀಮನ್ನಾರಾಯಣ’ ಸಿನಿಮಾದ ಸ್ಕ್ರಿಪ್ಟ್ ಮತ್ತು ನಿರ್ದೇಶನ ವಿಭಾಗಗಳಲ್ಲಿ ಕೆಲಸ ಮಾಡಿದ್ದ ಗಣೇಶ್ ಮನಸ್ಸಿನಲ್ಲಿ ಹಲವು ಕಥೆಯ ಎಳೆಗಳು ಇದ್ದವು. ಸಣ್ಣ ಬಜೆಟ್‌ನಲ್ಲಿ ಸ್ವತಂತ್ರ ಸಿನಿಮಾ ಮಾಡುವ ಕನಸೂ ದಟ್ಟವಾಗಿಯೇ ಇತ್ತು. ಹಾಗಾಗಿಯೇ ‘ನೀಲಿ ಹಕ್ಕಿ’ಗೆ ರೆಕ್ಕೆ ಕಟ್ಟುವ ಕೆಲಸಕ್ಕೆ ಮುಂದಾದರು. ಆದರೆ ಈಗಲೂ ರಕ್ಷಿತ್ ಶೆಟ್ಟಿ ತಮಗೆ ಕೊಡುತ್ತಿರುವ ಪ್ರೋತ್ಸಾಹವನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

‘ತುಂಬ ಕಡಿಮೆ ಬಜೆಟ್‌ನಲ್ಲಿ ಮಹತ್ವದ ಸಿನಿಮಾ ಮಾಡಲು ಸಾಧ್ಯ ಎಂದು ನನಗೆ ನಂಬಿಕೆ ಇತ್ತು. ಕಮರ್ಷಿಯಲ್ ಸಿನಿಮಾಗಳಿಗಿಂತ ಇಂಡಿಪೆಂಡೆಂಟ್ ಸಿನಿಮಾದ ಮೂಲಕವೇ ನಿರ್ದೇಶನ ಪಯಣ ಶುರುವಾಗಬೇಕು ಎಂಬುದು ನನ್ನ ಆಸೆಯಾಗಿತ್ತು. ಸಮಾನಮನಸ್ಕ ಸ್ನೇಹಿತರೆಲ್ಲ ಸೇರಿಕೊಂಡು ಇದೇ ಉದ್ದೇಶದಿಂದ ಒಂದು ನಿರ್ಮಾಣಸಂಸ್ಥೆಯನ್ನೂ ಆರಂಭಿಸಿದೆವು. ಅದರ ಮೊದಲ ಪ್ರಯತ್ನವೇ ‘ನೀಲಿ ಹಕ್ಕಿ’ ಎಂದು ತಮ್ಮ ನಿರ್ದೇಶನದ ಚೊಚ್ಚಲ ಸಿನಿಮಾ ಶುರುವಾದ ಕುರಿತು ಅವರು ಹೇಳಿಕೊಳ್ಳುತ್ತಾರೆ.

‘ನಮ್ಮದು ಅದ್ಭುತ ಸಿನಿಮಾ ಎಂದು ನಾನು ಹೇಳಿಕೊಳ್ಳುವುದಿಲ್ಲ, ಆದರೆ ಖಂಡಿತ ಪ್ರಾಮಾಣಿಕ ಪ್ರಯತ್ನ’ ಎನ್ನುವ ಅವರು ಸಿನಿಮಾ ಕುರಿತು ವಿವರಿಸುವುದು ಹೀಗೆ: ‘ಹತ್ತು ವರ್ಷದ